# ಅನುಪಮಾ ನಿರಂಜನ ಅವರ ಕಾದಂಬರಿ 'ಎಳೆ': ಒಂದು ಪರಿಶೀಲನೆ

**ಗೋಪಿ ಎಸ್.ಎಂ.***

**DOI: https://doi.org/10.5281/zenodo.19638128**

**ABSTRACT**

ಅನುಪಮಾ ನಿರಂಜನ ಅವರ 'ಎಳೆ' ಕಾದಂಬರಿಯು ನೇಕಾರರ ಬದುಕು, ವರ್ಗಸಂಘರ್ಷ ಮತ್ತು ಶೋಷಣೆಯ ವಿರುದ್ಧದ ಕಾರ್ಮಿಕ ಜಾಗೃತಿಯನ್ನು ನೈಜವಾಗಿ ಕಟ್ಟಿಕೊಡುತ್ತದೆ. ಶಿವನೂರು ಎಂಬ ಪ್ರಾದೇಶಿಕ ಹಿನ್ನೆಲೆಯಲ್ಲಿ ನಡೆಯುವ ಕಥೆಯು, ಬಂಡವಾಳಶಾಹಿ ಉಗ್ರಪ್ಪನ ದಬ್ಬಾಳಿಕೆ ಹಾಗೂ ಬಡ ನೇಕಾರರ ದಯನೀಯ ಸ್ಥಿತಿಯನ್ನು ಚಿತ್ರಿಸುತ್ತದೆ. ವಿದ್ಯಾವಂತ ಯುವಕ ರಂಗದಾಸನ ನೇತೃತ್ವದಲ್ಲಿ ಒಗ್ಗೂಡುವ ಕಾರ್ಮಿಕರು ತಮ್ಮ ಹಕ್ಕುಗಳಿಗಾಗಿ ಹೋರಾಡುವ ಪರಿಯನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಇದರೊಟ್ಟಿಗೆ, ಇಷ್ಟವಿಲ್ಲದ ಮದುವೆಯಾಗಿ, ವೈಧವ್ಯ ಹಾಗೂ ಕೌಟುಂಬಿಕ ದೌರ್ಜನ್ಯಕ್ಕೊಳಗಾಗುವ ಗಿರಿಜೆಯು ರಂಗದಾಸನ ಬೆಂಬಲದಿಂದ ಹೊಸ ಬದುಕಿಗೆ (ವಿಧವಾ ವಿವಾಹ) ತೆರೆದುಕೊಳ್ಳುವ ಪ್ರಸಂಗವು ಗಮನಾರ್ಹವಾಗಿದೆ. ಸಮಾಜದ ಮೌಢ್ಯ, ಜಡತ್ವ ಮತ್ತು ಶೋಷಣೆಯನ್ನು ಧಿಕ್ಕರಿಸಿ ವೈಚಾರಿಕತೆಯೆಡೆಗೆ ಹಾಗೂ ಸಮಾನತೆಯೆಡೆಗೆ ಸಾಗುವ ಆಶಯವನ್ನು ಇದು ಸ್ಪಷ್ಟಪಡಿಸುತ್ತದೆ.

**KEYWORDS**: ಎಳೆ ಕಾದಂಬರಿ, ಅನುಪಮಾ ನಿರಂಜನ, ಕಾರ್ಮಿಕ ಜಾಗೃತಿ, ನೇಕಾರರ ಬದುಕು, ವಿಧವಾ ವಿವಾಹ.

* **ಡಾ. ಗೋಪಿ ಎಸ್.ಎಂ.,** ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು.

ಅನುಪಮಾ ನಿರಂಜನ ಅವರು ಕನ್ನಡ ಸಾಹಿತ್ಯಕ್ಕೆ ವಿಶಿಷ್ಟ ಕೃತಿಗಳನ್ನು ನೀಡಿದ್ದಾರೆ. ವೃತ್ತಿಯಿಂದ ವೈದ್ಯೆಯಾಗಿದ್ದು ಸಮಾಜದ ಅನೇಕ ರೋಗಗ್ರಸ್ತ ಸಂಗತಿಗಳಿಗೆ ಇವರ ಕೃತಿ ಕನ್ನಡಿ ಹಿಡಿಯುತ್ತಾ, ಆರೋಗ್ಯಪೂರ್ಣ ಅಂಶಗಳನ್ನು ಪ್ರತಿಪಾದಿಸುತ್ತದೆ. ಇವರ ಬಹುತೇಕ ಕೃತಿಗಳು ವೈಜ್ಞಾನಿಕ ವಿಚಾರಗಳನ್ನು ಜನರಿಗೆ ಸರಳವಾಗಿ ತಲುಪಿಸುವಲ್ಲಿ ಯಶಸ್ವಿಯಾಗಿವೆ. ಇವರ ಕಥೆ, ಕಾದಂಬರಿ, ಅಂಕಣ ಬರಹಗಳು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ವಿಶೇಷ ಪ್ರಾಮುಖ್ಯತೆ ಪಡೆದಿವೆ. ಇಂತಹ ಇವರ ಪ್ರಮುಖ ಕಾದಂಬರಿಗಳಲ್ಲಿ 'ಎಳೆ' ಕಾದಂಬರಿಯು ಮುಖ್ಯವಾದುದಾಗಿದೆ. ಶೀರ್ಷಿಕೆಯೇ ಸೂಚಿಸುವಂತೆ 'ಎಳೆ' ಎಂಬುದು ನೂಲಿನ ಎಳೆಗಳನ್ನು ಸೇರಿಸಿ ಬಟ್ಟೆಗಳನ್ನು ತಯಾರಿಸುವ ಹಾಗೆಯೇ ಒಂದು ಸಮಾಜದಲ್ಲಿನ ಜನಾಂಗೀಯ ಶೋಷಣೆಗಳು, ನಂಬಿಕೆ-ನಡಾವಳಿಗಳನ್ನು ಎಳೆಎಳೆಯಾಗಿ ಸಾಂಕೇತಿಸುವ ಹಿನ್ನೆಲೆಯಲ್ಲಿ ಕಾದಂಬರಿ ಮೂಡಿ ಬಂದಿರುವುದು ಔಚಿತ್ಯಪೂರ್ಣವಾಗಿದೆ.

ಈ ಕಾದಂಬರಿಯು ಶಿವನೂರಿನ ಪ್ರಾದೇಶಿಕ ಪರಿಸರ, ಅಲ್ಲಿನ ಸಮಾಜದ ನಡಾವಳಿ, ಮಾಲೀಕ-ಕೂಲಿಕಾರರ ನಡುವಿನ ಸಂಘರ್ಷ, ಧಾರ್ಮಿಕ ನಂಬಿಕೆ ಕುರಿತ ಆಚರಣೆಗಳು, ಆಧುನಿಕ ಶಿಕ್ಷಣ ನೀಡಿದಂತಹ ಅರಿವು, ವೈವಾಹಿಕ ಪದ್ಧತಿಯ ವಿಚಾರಗಳು, ರೂಢಿ ಸಾಂಪ್ರದಾಯಿಕತೆಯ ಜಡತೆಯನ್ನು ಈ ಕಾದಂಬರಿಯಲ್ಲಿ ವಾಸ್ತವ ನೆಲೆಗಟ್ಟಿನ ಹಿನ್ನೆಲೆಯಲ್ಲಿ ಹೇಳುತ್ತಲೇ ಹೊಸ ಬದಲಾವಣೆಗೆ ತೆರೆದುಕೊಳ್ಳುವ ಮುನ್ಸೂಚನೆಯನ್ನು ನೀಡಿದ್ದಾರೆ. ಶಿವನೂರಿನಲ್ಲಿ ವಾಸಿಸುವಂತಹ ಬಹುಸಂಖ್ಯಾತ ಜನ ಬಡವರು. ಇಲ್ಲಿನ ಬಹುಜನರು ಜೀವನೋಪಾಯಕ್ಕಾಗಿ ನೇಕಾರ ವೃತ್ತಿಯನ್ನು ಅವಲಂಬಿಸಿದ್ದಾರೆ. ಇವರುಗಳು ಊರಿನ ಶ್ರೀಮಂತ ಉಗ್ರಪ್ಪನ ಬಳಿ ನೇಕಾರ ವೃತ್ತಿಯನ್ನು ಮಾಡುತ್ತಿದ್ದಾರೆ. ಈ ಕೆಲಸಗಾರರುಗಳನ್ನೆಲ್ಲ ಜೀತದಾಳುಗಳಂತೆ ದುಡಿಸಿಕೊಳ್ಳುತ್ತಾ ಉಗ್ರಪ್ಪನು ಶ್ರೀಮಂತನಾಗಿ ತನ್ನ ತಿಜೋರಿಯನ್ನು ಹೆಚ್ಚು ಮಾಡಿಕೊಂಡಿದ್ದಾನೆ. ಬಡ ಕಾರ್ಮಿಕರ ಬಗ್ಗೆ ಯಾವುದೇ ಅನುಕಂಪ, ಮಾನವೀಯತೆ ಇಲ್ಲದಂತೆ ಅವರನ್ನು ದುಡಿಮೆಯ ಯಂತ್ರಗಳಂತೆ ಬಳಸಿಕೊಳ್ಳುತ್ತಾ ಆ ಊರಿನಲ್ಲಿ ತಾನೇ ಶ್ರೀಮಂತನಾಗಿ ಮೆರೆಯುತ್ತಿದ್ದಾನೆ.

ಇಂತಹ ಊರಿನಲ್ಲಿ ಯುವಕರಾದಂತಹ ರಂಗದಾಸ ಮತ್ತು ಗಂಗಾಧರ ಪದವಿ ಓದುತ್ತಿದ್ದು ಹಳೆಯ ಮೌಢ್ಯಗಳನ್ನು ತಿರಸ್ಕರಿಸುವ ಮನೋಭಾವದವರಾಗಿದ್ದಾರೆ. ರಂಗದಾಸ ಬಡವನಾಗಿದ್ದು ಸ್ವಾಭಿಮಾನ ವ್ಯಕ್ತಿತ್ವ ಉಳ್ಳವನು. ಗಂಗಾಧರ ಉಗ್ರಪ್ಪನ ಮಗನಾಗಿದ್ದರೂ ರಂಗದಾಸನ ನೆಚ್ಚಿನ ಸ್ನೇಹಿತನಾಗಿದ್ದು, ಅಪ್ಪನ ಹಂಗಿನಿಂದ ಹೊರಬರಲು ಯೋಚಿಸುತ್ತಾ, ತನ್ನದೇ ಆದ ಸ್ವತಂತ್ರ ಮನೋಭಾವವನ್ನು ಹೊಂದಿದ್ದಾನೆ. ಇವನ ತಂಗಿ ಗಿರಿಜೆ ಓದುವ ಆಸೆ ಇದ್ದರೂ ತಂದೆಯ ತಿರಸ್ಕಾರದಿಂದಾಗಿ ಓದನ್ನು ಮುಂದುವರಿಸಲಾಗದೆ ಮನೆಯಲ್ಲಿಯೇ ಮನೆ ಕೆಲಸ ಮಾಡಿಕೊಂಡು ಇರಬೇಕಾಗಿದೆ. ತಂದೆ ಉಗ್ರಪ್ಪನು 'ಹೆಣ್ಣು ಮಗಳಿಗೆ ಉನ್ನತ ಶಿಕ್ಷಣ ಬೇಕಾಗಿಲ್ಲ' ಎಂದು ನಿರ್ಧರಿಸಿ ಅವಳನ್ನು ಮನೆಯಲ್ಲೇ ಉಳಿಯುವಂತೆ ಮಾಡಿದ್ದಾನೆ. ಗಿರಿಜೆಯು ಬಾಲ್ಯದಿಂದಲೇ ರಂಗದಾಸನ ವ್ಯಕ್ತಿತ್ವಕ್ಕೆ ಮಾರುಹೋಗಿ ಅವನನ್ನು

ಮನಸ್ಸಿನಲ್ಲಿಯೇ ಇಷ್ಟಪಡುತ್ತಾ ಆರಾಧಿಸುತ್ತಾ ಬರುತ್ತಿರುತ್ತಾಳೆ. ರಂಗದಾಸನ ತಂದೆ ಚೌಡಪ್ಪ ಉಗ್ರಪ್ಪನ ಬಳಿ ನೇಕಾರ ವೃತ್ತಿ ಮಾಡುತ್ತಲೇ ಕೆಮ್ಮು ಜ್ವರ ಬಂದು ನರಳುತ್ತಿರುತ್ತಾನೆ. ಹೀಗಿದ್ದರೂ ಚೌಡಪ್ಪನ ಬಗ್ಗೆ ಉಗ್ರಪ್ಪನಿಗೆ ಯಾವುದೇ ರೀತಿಯ ಕರುಣೆಯ ಭಾವ ಇಲ್ಲದೆ ಅವನನ್ನು ನಿಷ್ಕಾರುಣದಿಂದಲೇ ಕಾಣುತ್ತಾನೆ.

ರಂಗದಾಸ ಬಿ.ಎ. ಪದವಿ ಓದುತ್ತಿದ್ದು ಸಮಾಜಶಾಸ್ತ್ರದ ವಿದ್ಯಾರ್ಥಿಯಾಗಿದ್ದಾನೆ. ಇವನು ತನ್ನ ಸುತ್ತಮುತ್ತಲ ಸಮಾಜದ ಅಸಮಾನತೆ ವೈರುಧ್ಯಗಳನ್ನು ಕಂಡು ಬೇಸರ ವ್ಯಕ್ತಪಡಿಸುತ್ತಿರುತ್ತಾನೆ. ತನ್ನೂರಿನಲ್ಲಿ ವಿಶಾಲವಾಗಿ ಬೆಳೆದಂತಹ ಮರಗಿಡಗಳು, ತೋಟ ಹೊಲ ಗದ್ದೆಗಳನ್ನು ನೋಡಿದಾಗ ಇವೆಲ್ಲ ತನ್ನೂರಿನ ಬಡ ಜನರ ಬೆವರಿನ ಪರಿಶ್ರಮವೆಂದು ನೆನೆದು ಆ ಬೆವರಿನ ಪ್ರತಿಫಲವನ್ನು ಶ್ರೀಮಂತರು ಸೂರೆ ಮಾಡುತ್ತಿರುವುದನ್ನು ನೋಡಿ ಅಸಹಾಯಕತೆಯಿಂದ ವ್ಯಥೆಪಟ್ಟುಕೊಳ್ಳುತ್ತಾನೆ. ಮುನೇಶ್ವರನ ಗುಡಿಗೆ ಬರುವಂತಹ ಭಕ್ತಾದಿಗಳು ಕುರಿ ಕೋಳಿಗಳನ್ನು ಬಲಿ ನೀಡುವುದನ್ನು ನೋಡಿ ಹಿಂಸೆಯ ಮೇಲೆ ಈ ಸಮಾಜ ಹೇಗೆ ಬೆಳೆಯುತ್ತಾ ಬಂದಿದೆ ಎಂದು ಗೆಳೆಯ ಗಂಗಾಧರನ ಜೊತೆ ಚರ್ಚಿಸುತ್ತಾನೆ.

ಹಿಂದೆಲ್ಲ ಆದಿವಾಸಿಗಳು, ಬುಡಕಟ್ಟು ಜನರು ತಮ್ಮ ನೆಲ ಫಲವತ್ತಾಗಲಿ ಅಂತ ಮನುಷ್ಯರನ್ನೇ ಬಲಿಕೊಡುತ್ತಿದ್ದರಂತೆ, ನೆಲನ ಉತ್ತು, ಗಂಡಸೊಬ್ಬನನ್ನು ಹೆಂಗಸೊಬ್ಬಳನ್ನು ಕೊಂದು ಆ ಮಣ್ಣಲ್ಲಿ ಹೂಳುತ್ತಿದ್ದರಂತೆ. ಕೆಲವು ಕಡೆ ಬಲಿಕೊಟ್ಟು ಮನುಷ್ಯರ ರಕ್ತನಾ ಹೊಲಗದ್ದೆಗಳ ತುಂಬಾ ಚಿಮುಕಿಸುತ್ತಿದ್ದರಂತೆ ಎಂದು ಇತಿಹಾಸದಲ್ಲಿ ಆದ ಬಲಿಯ ಹಿನ್ನೆಲೆಗಳನ್ನು ರಂಗದಾಸ ಗಂಗಾಧರನಿಗೆ ತಿಳಿಸುತ್ತಾನೆ. ಅದೇ ರೀತಿ ಫಿಲಿಪೈನ್ಸ್ ದೇಶದಲ್ಲಿ ಮನುಷ್ಯ ತಲೇನ ಬೇಟೆಯಾಡುವ ಜನರಿದ್ರಂತೆ, ಅವರು ತಮ್ಮ ಪ್ರತಿ ಗದ್ದೆ ತೋಟದ ಆರಂಭಕಾಲದಲ್ಲಿ, ಕೊಯ್ಲಿನ ಕಾಲದಲ್ಲಿ ಒಬ್ಬೊಬ್ಬ ಮನುಷ್ಯನ ಬಲಿ ಕಾಣಿಕೆ ಕೊಡುತ್ತಿದ್ದರಂತೆ. ಕೆರೆ ಏರಿ ಕಟ್ಟಿಸುವಾಗಲು ಶಿವಣ್ಣನಾಯಕನು ಬಲಿ ಕೊಟ್ಟಿದ್ನಂತೆ, ಸುಮಾರು 200 ವರ್ಷಗಳ ಹಿಂದೆ ಪಾಳೆಯಗಾರನಾಗಿದ್ದ ಶಿವಣ್ಣನಾಯಕ ತನ್ನ ಪ್ರಜೆಗಳಿಗೆ ದೊಡ್ಡದೊಂದು ಕೆರೆ ನಿರ್ಮಿಸುವ ಯೋಜನೆ ಹಾಕಿಕೊಂಡಿದ್ದ, ಏರಿ ಎಷ್ಟು ಬಾರಿ ಕಟ್ಟಿದರೂ ಬೆಳಗಾಗುವುದರೊಳಗೆ ಕುಸಿದು ಬೀಳುತ್ತಿತ್ತಂತೆ; ಆಗ ಕುಲಪುರೋಹಿತರು ಶಿವಣ್ಣನಾಯಕನನ್ನು ಕರೆದು 'ಪ್ರಭುಗಳೇ ಇದಕ್ಕೆ ಮನುಷ್ಯ ಬಲೀನೇ ಬೇಕು' ಎಂದರಂತೆ ಅಂದು ರಾತ್ರಿ ಏರಿಯ ಕಾವಲಿಗೆ ಮಲಗಿದ್ದ ಕಾವಲು ಭಟ ಮತ್ತು ಆತನ ಮಗನ ರುಂಡ ಮುಂಡಗಳು ಬೆಳಗಾಗುವ ಹೊತ್ತಿಗೆ ಬೇರೆ ಬೇರೆಯಾಗಿದ್ದವು. ಏರಿಯ ಬುಡದಲ್ಲಿ ರಕ್ತದೋಕುಳಿಯಾಗಿತ್ತು. ಏರಿ ರಕ್ತದಲ್ಲಿ ಮಿಂದು ಗಟ್ಟಿಯಾಗಿ ನಿಂತಿತ್ತು. ಹೀಗೆ ಬಲಿಯ ಕಥನಗಳು ಕೆಳವರ್ಗದವರ ಶ್ರಮ ಮತ್ತು ರಕ್ತದ ಮೇಲೆ ಹೇಗೆ ಚರಿತ್ರೆ ಮೂಡಿ ಬಂದಿದೆ ಎಂಬುದನ್ನು ರಂಗದಾಸ ತಿಳಿಸುತ್ತಾನೆ.

ಉಗ್ರಪ್ಪನಿಗೆ ಶಂಕರ ಎಂಬ ಒಬ್ಬ ತಮ್ಮ ಇದ್ದು, ಆತ ಕೆಳವರ್ಗದ ಹೆಣ್ಣೊಬ್ಬಳನ್ನು ಪ್ರೀತಿಸಿ ತಂದೆಯ ಮನಸ್ತಾಪಕ್ಕೆ ಗುರಿಯಾಗಿ, ಆಸ್ತಿ ಅಂತಸ್ತನ್ನ ಬಿಟ್ಟು

ಪ್ರೀತಿಗಾಗಿ ಊರನ್ನೇ ಬಿಟ್ಟು ಹೋಗಿರುತ್ತಾನೆ. ಉಗ್ರಪ್ಪನ ಹೆಂಡತಿ ಸೂರಮ್ಮ, ಈಕೆಗೆ ನಾಲ್ಕು ಜನ ಮಕ್ಕಳುಗಳು ಮೊದಲನೆಯವನು ನಂಜುಂಡ, ಗಂಗಾಧರ, ಗಿರಿಜೆ ಹಾಗೂ ಪಾಪಣ್ಣಿ, ಕೊನೆಯ ಮಗ ಪಾಪಣ್ಣಿಯು ಅಂಗವೈಕಲ್ಯಕ್ಕೆ ಒಳಗಾಗಿ ಮಾನಸಿಕ ಅಸ್ವಸ್ಥನಾಗಿರುತ್ತಾನೆ. ಈತನನ್ನು ತಾಯಿ ಬಹಳ ಪ್ರೀತಿ ಮತ್ತು ಜತನದಿಂದ ಕಾಪಾಡಿಕೊಳ್ಳುತ್ತಿರುತ್ತಾಳೆ. ಉಗ್ರಪ್ಪನಿಗೆ ಕೊನೆಯ ಮಗನನ್ನು ಕಂಡಾಗಲೆಲ್ಲಾ ಕೋಪ, ಸಿಡಿಮಿಡಿ ತೋರುತ್ತಿರುತ್ತಾನೆ. ಈತ ಯಾಕಾದರೂ ಹುಟ್ಟಿದನೋ ಎಂದು ಶಪಿಸುತ್ತಿರುತ್ತಾನೆ.

ಚೌಡಪ್ಪನ ಹೆಂಡತಿ ಪುಟ್ಟಮ್ಮ ಈಕೆಯ ಮಗ ರಂಗದಾಸ ಹಾಗೂ ಮಗಳು ಮಹಾಲಕ್ಷ್ಮಿ . ಮಹಾಲಕ್ಷ್ಮಿಯನ್ನು ಮಹಾಲಿಂಗಪುರಕ್ಕೆ ಮದುವೆ ಮಾಡಿಕೊಡಲಾಗಿತ್ತು. ಆಕೆ ತವರು ಮನೆಗೆ ಬಂದಾಗೆಲ್ಲ ಆಕೆಗೆ ಅವಳ ಮಕ್ಕಳಿಗೆ ಸರಿಯಾದ ಅತಿಥಿಸತ್ಕಾರ ಮಾಡಲಾಗಲಿಲ್ಲವಲ್ಲ ಎಂದು ತಾಯಿ ಪುಟ್ಟಮ್ಮಳು ವ್ಯಥೆ ಪಡುತ್ತಿದ್ದಳು, ಕಾರಣ ಮನೆಯಲ್ಲಿದ್ದ ಬಡತನ. ಶಿವಪುರದಲ್ಲಿ ಸುಮಾರು 15 ಸಾವಿರ ಜನಸಂಖ್ಯೆಯಲ್ಲಿ ಮುಕ್ಕಾಲು ಭಾಗ ನೇಕಾರರೇ ಇದ್ದರು. ಅದರಲ್ಲಿಯೂ ಒಳಪಂಗಡಗಳು ನೇಕಾರರು, ತೊಗಟರು, ದೇವಾಂಗದವರು, ತಾಳ್ಯರು ಇತ್ಯಾದಿ. ಇವರೆಲ್ಲರ ವೃತ್ತಿ ಒಂದೇ ಆದರೂ ಒಂದೇ ಜಾತಿಯವರೆಂಬ ಒಗ್ಗಟ್ಟು ಅವರಲ್ಲಿ ಇರಲಿಲ್ಲ. ಅವರಲ್ಲಿ ಎದ್ದು ಕಾಣುತ್ತಿದ್ದದ್ದು ಎರಡೇ ಗುಂಪು ಒಂದು ಸಿರಿವಂತರದ್ದು ಮತ್ತೊಂದು ಕೂಲಿಗೆ ಮಗ್ಗಗಳನ್ನು ನಡೆಸುವ ಬಡ ನೇಕಾರರದು.

ಆ ಊರಿನಲ್ಲಿ ಎಂ.ಎಲ್.ಎ. ಆಗಿದ್ದ ಮುದ್ದುಸ್ವಾಮಿ ಶ್ರೀಮಂತನಾಗಿದ್ದು, ಅಹಂಕಾರ ಗರ್ವಗಳನ್ನೇ ಮೈತುಂಬಿಕೊಂಡಿದ್ದನು. ಈತನ ತಾಯಿ ಸಂಕಮ್ಮ ಗರ್ವಿಷ್ಟ ಹೆಂಗಸಾಗಿದ್ದಳು. ಈತನ ಮಗಳು ನಾಗಲಕ್ಷ್ಮಿ ಮತ್ತೊಬ್ಬ ಮಗ ಮೂಡಲಯ್ಯ. ಉಗ್ರಪ್ಪನು ತನ್ನ ಮಗಳು ಗಿರಿಜೆಯನ್ನು ಮುದ್ದುಸ್ವಾಮಿಗೆ ಲಗ್ನ ಮಾಡಿಕೊಳ್ಳಲು ಆಲೋಚಿಸಿದನು, ಜಾತಕ ಸರಿಯಾಗಿ ಕೂಡಿ ಬರದಿದ್ದಾಗ ಜೋಯಿಸರಿಗೆ 'ಜಾತಕವನ್ನು ಹೇಗಾದರೂ ಹೊಂದಿಸಿ ಕೊಡಿ ಅದಕ್ಕೆ ಎಷ್ಟು ಖರ್ಚು ಬೀಳ್ತದೋ ಕೊಡ್ತೀನಿ' ಎಂದು ಹಣದಾಸೆಯಿಂದ ಶ್ರೀಮಂತ ಮನೆತನದ ಸಂಬಂಧ ಬೆಳೆಸಲು ಯಾವ ದಾರಿ ತುಳಿಯಲು ಸಿದ್ಧನಿರುತ್ತಾನೆ.

ಮುದ್ದುಸ್ವಾಮಿಯು ಅಹಂಕಾರಿಯಾಗಿದ್ದು ಡೊಳ್ಳುಹೊಟ್ಟೆ, ಕನ್ನಡಕ, ಮೀಸೆಗಳು ಸಿರಿವಂತಿಕೆಯ ಪ್ರತೀಕದಂತೆ ಕಂಡುಬರುತ್ತಿತ್ತು. ಮುದ್ದುಸ್ವಾಮಿ ನಗರದಲ್ಲಿ ಬೇಕಾದಷ್ಟು ಹೆಂಗಸರ ಸಹವಾಸವನ್ನು ಮಾಡಿ ಕುಡಿತ, ಕುಣಿತ, ಜೂಜು ಹಲವಾರು ಚಟಗಳಿಗೆ ದಾಸನಾಗಿರುತ್ತಾನೆ. ಹೀಗಿದ್ದರೂ ದುಡ್ಡಿಗಾಗಿ ಉಗ್ರಪ್ಪ ಅವನನ್ನು ಅಳಿಯನನ್ನಾಗಿ ಮಾಡಿಕೊಳ್ಳಲು ಯೋಚಿಸುತ್ತಾನೆ. ಗಿರಿಜಾಳಿಗೆ ಇಷ್ಟವಿಲ್ಲದಿದ್ದರೂ ತಂದೆತಾಯಿಯ ಬಲವಂತಕ್ಕೆ ಮುದ್ದುಸ್ವಾಮಿಯನ್ನು ಮದುವೆಯಾಗುತ್ತಾಳೆ. ಮದುವೆಯಾದ ದಿನದಿಂದ ಮುದ್ದುಸ್ವಾಮಿಯು ಅವಳನ್ನು ಹೆಂಡತಿ ಎಂಬ ಪ್ರೀತಿ ವಾತ್ಸಲ್ಯದಿಂದ ಕಾಣುವುದೇ ಇಲ್ಲ, ಅವಳನ್ನು ಒಬ್ಬ ವೇಶ್ಯೆಯ ಹಾಗೆ ಕಾಣುತ್ತಾ

ಬಲಾತ್ಕಾರದಿಂದ ಅವಳನ್ನು ಬಳಸಿಕೊಳ್ಳುತ್ತಾನೆ. ಹೀಗೆ ಒಲ್ಲದ ಸಂಸಾರದಲ್ಲಿ ಗಿರಿಜೆ ಬಸುರಿಯಾಗುತ್ತಾಳೆ. ಆಕೆ ಬಸುರಿಯಾದ ಮೇಲೂ ಮುದ್ದುಸ್ವಾಮಿಗೆ ಅವಳ ಬಗೆಗೆ, ಮಗುವಿನ ಬಗೆಗೆ ಯಾವುದೇ ರೀತಿಯ ಪ್ರೀತಿ ಮಮಕಾರಗಳು ಇರುವುದಿಲ್ಲ. ಹಾಗಿದ್ದರೂ ಮದುವೆಯಾದ ಕಾರಣಕ್ಕಾಗಿ ಗಿರಿಜೆ ಹೇಗೋ ಹೊಂದಿಕೊಳ್ಳುತ್ತಾ ಹೋಗುತ್ತಿರುತ್ತಾಳೆ.

ಹೀಗಿರುವಾಗ ಒಮ್ಮೆ ಸ್ನಾನ ಮಾಡುತ್ತಿರುವಾಗ ಮುದ್ದುಸ್ವಾಮಿಗೆ ಹೃದಯಾಘಾತವಾಗಿ ಸಾವನ್ನಪ್ಪುತ್ತಾನೆ. ಅವನನ್ನು ತುರ್ತಾಗಿ ಆಸ್ಪತ್ರೆಗೆ ಸಾಗಿಸಿದರೂ ಅವನ ಪ್ರಾಣ ಉಳಿಯುವುದಿಲ್ಲ. ಅವನ ಸಾವಿಗೆ ಗಿರಿಜೆಯೇ ಕಾರಣವೆಂದು, ಅತ್ತೆ ಸಂಕಮ್ಮಳು ಸಹ ದೂಷಿಸುತ್ತಾಳೆ. ಹೀಗಾಗಿ ಗಿರಿಜೆಗೆ ಅತ್ತೆಯ ಮನೆಯಲ್ಲಿ ಕಿರುಕುಳ ಪ್ರಾರಂಭವಾಗುತ್ತದೆ. ಸಂಕಮ್ಮಳು 'ಗಂಡು ಮಗುವನ್ನು ಹೆತ್ತರೆ ಮಾತ್ರ ನಿನಗೆ ಇಲ್ಲಿ ಜಾಗ, ಇಲ್ಲದಿದ್ದರೆ ನಿನ್ನ ತವರು ಮನೆಯಲ್ಲಿ ಇದ್ದುಬಿಡು' ಎಂದು ಕಿರುಕುಳ ನೀಡುತ್ತಾಳೆ. ಹೀಗಾಗಿ ಮುದ್ದುಸ್ವಾಮಿಯ ಮರಣದ ನಂತರ ಗಿರಿಜೆಗೆ ಗಂಡನ ಮನೆಯಲ್ಲಿ ಅತ್ತೆ ಮತ್ತು ಮೈದುನನಿಂದ ಕಿರುಕುಳ ಶುರುವಾಗುತ್ತದೆ. ಒಮ್ಮೆ ಗಿರಿಜಾ ಗಂಡನ ಮನೆಯಲ್ಲಿರುವಾಗ ಅವಳ ಮೈದುನ ಮೂಡಲಯ್ಯ ಅವಳನ್ನು ಬಲಾತ್ಕಾರ ಮಾಡಲು ಪ್ರಯತ್ನಿಸುತ್ತಾನೆ, ಆಗ ಎಚ್ಚರಗೊಂಡ ಗಿರಿಜಾ ಮೂಡಲಯ್ಯನನ್ನು ತಿರಸ್ಕಾರ ಭಾವದಿಂದ ನೋಡುತ್ತಾಳೆ. ನಂತರ ಅತ್ತೆ ಸಂಕಮ್ಮಳು ಈ ಘಟನೆಯನ್ನು ತಿರುಚಿ ಗಿರಿಜೆಯೇ ಮೂಡಲಯ್ಯನನ್ನು ಬಯಸಿದಳು ಎಂದು ಉಗ್ರಪ್ಪನ ಬಳಿ ಚಾಡಿ ಹೇಳುತ್ತಾಳೆ. ಈ ಘಟನೆಯಿಂದ ಗಿರಿಜೆಯು ಶಾಶ್ವತವಾಗಿ ಗಂಡನ ಮನೆಯನ್ನು ಬಿಟ್ಟು ತಂದೆಯ ಮನೆಗೆ ಬಂದು ಸೇರಿಕೊಳ್ಳುವಂತಾಗುತ್ತದೆ.

ಉಗ್ರಪ್ಪನ ಬಳಿ ಕೆಲಸ ಮಾಡುತ್ತಿದ್ದ ಅರಸಪ್ಪನು ಕೆಲಸ ಮಾಡುತ್ತಿರುವಾಗ ಮಗ್ಗದ ಮೇಲಿನ ಧೂಳು ತೆಗೆಯಲು ಹೋದಾಗ ಉಗ್ರಪ್ಪ ಬಂದು ಮಗ್ಗಗಳ ಸ್ವಿಚ್ ಹಾಕಿದಾಗ, ತಿರುಗುತ್ತಿದ್ದ ಬೆಲ್ಟಿಗೆ ಅರಸಪ್ಪನ ಬಲಗೈ ಕಡಿದು ತುಂಡಾಗಿ ಹೋಗುತ್ತದೆ. ಆಗ ಅವನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಾರೆ. ಆ ಸಂದರ್ಭದಲ್ಲಿ ಉಗ್ರಪ್ಪನು 'ತನ್ನದೇನು ತಪ್ಪಿಲ್ಲ' ಎಂದು ಭಾವಿಸುತ್ತಾ ತಪ್ಪೆಲ್ಲಾ ಅರಸಪ್ಪನದು ಎಂದು ಅವನಿಗೆ ಚಿಕಿತ್ಸೆ ಕೊಡಿಸಲು ಹಿಂದೇಟು ಹಾಕುತ್ತಾನೆ. ಆಗ ಕಾರ್ಮಿಕರೆಲ್ಲ ಒಂದುಗೂಡಿ ಜೋರು ಮಾಡಿದಾಗ ಉಗ್ರಪ್ಪನು ಅವನಿಗೆ ಚಿಕಿತ್ಸೆ ಕೊಡಿಸುತ್ತಾನೆ. ಆದರೂ ಅರಸಪ್ಪನ ಬಲಗೈಯನ್ನು ಸರಿಪಡಿಸಲಾಗದೆ ಕತ್ತರಿಸಿ ಹಾಕಲಾಗುತ್ತದೆ. ಈ ಸಂದರ್ಭದಲ್ಲಿ ರಂಗದಾಸನು ಊರಿನ ಜನರನ್ನೆಲ್ಲ ಒಗ್ಗೂಡಿಸಿ ಸಂಘಟಿಸಿ ಉಗ್ರಪ್ಪನ ಬಳಿ ನ್ಯಾಯ ಕೇಳಿ ಅವನಿಂದ ಪರಿಹಾರ ಧನವನ್ನು ಪಡೆದು ಅರಸಪ್ಪನ ಕುಟುಂಬಕ್ಕೆ ನೀಡುತ್ತಾನೆ.

ಹೀಗೆ ರಂಗದಾಸನ ನಾಯಕತ್ವದಲ್ಲಿ ಕಾರ್ಮಿಕರೆಲ್ಲ ಸಂಘಟಿತರಾಗುತ್ತಾರೆ. ಹೀಗಿರುವಾಗ ಆ ಊರಿಗೆ ತಿಮ್ಮಪ್ಪನೆಂಬುವವನು ನಗರದಿಂದ ಬಂದಿರುತ್ತಾನೆ. ಅವನು ಸಹ ಕಾರ್ಮಿಕರ ಸಂಘಟನೆಯನ್ನು ಕಟ್ಟಲು ನಾಯಕತ್ವವನ್ನು ವಹಿಸಿಕೊಳ್ಳಲು ಉತ್ಸುಕನಾಗಿರುತ್ತಾನೆ. ಇವನ ಉತ್ಸಾಹವನ್ನು ಕಂಡಂತಹ ರಂಗದಾಸ ಅವನನ್ನೇ

ನಾಯಕನಾಗುವಂತೆ ಪ್ರೇರೇಪಣೆ ನೀಡುತ್ತಾನೆ. ಊರಿನಲ್ಲಿ ಕಾರ್ಮಿಕ ಸಂಘಟನೆಯು ಪ್ರಬಲವಾಗುತ್ತಿದ್ದಂತೆ ಉಗ್ರಪ್ಪ ಮತ್ತು ಅವನಂತಹ ಶ್ರೀಮಂತರುಗಳು ಸ್ವಲ್ಪ ಭಯಭೀತರಾಗುತ್ತಾರೆ. ಏಕೆಂದರೆ ಕಾರ್ಮಿಕರು ತಮ್ಮ ಹಕ್ಕು, ಶ್ರಮಕ್ಕೆ ತಕ್ಕ ಕೂಲಿಯನ್ನು ಕೇಳುವಷ್ಟರ ಮಟ್ಟಿಗೆ ಎಚ್ಚೆತ್ತುಕೊಂಡಿರುವುದು ಗಮನಾರ್ಹವಾಗಿದೆ.

ಶಿವನೂರಿಗೆ ಭಾಗವತರ ಕಥಾಕಾಲಕ್ಷೇಪ ಕೇಳಲು ಜನ ಕಿಕ್ಕಿರಿದು ನೆರೆಯುತ್ತಾರೆ. ಆಗ ಭಾಗವತರು ಬಹಳ ಆಕರ್ಷಕವಾಗಿ ನೇಕಾರ ವಂಶ ಹೇಗೆ ಜನ್ಮ ತಾಳಿತು ಎಂದು ಕಥೆಯನ್ನು ಹೇಳುತ್ತಾನೆ. ಆದಿಕಾಲದಲ್ಲಿ ಬ್ರಹ್ಮನಿಂದ ಸೃಷ್ಟಿಯಾದ ದೇವಮಾನವರು ನಗ್ನರಾಗಿದ್ದರು, ಅವರ ದುರವಸ್ಥೆಯನ್ನು ಕಂಡು, ನಾರದರು ಕೈಲಾಸ ಪರ್ವತಾಧಿಪತಿಯಾದ ಈಶ್ವರನಲ್ಲಿಗೆ ಹೋಗಿ ಈ ತೊಂದರೆ ನಿವಾರಿಸುವಂತೆ ಪ್ರಾರ್ಥನೆ ಮಾಡಿಕೊಂಡರು. ಆಗ ಮಹಾಮಹಿಮನ ಫಾಲನೇತ್ರದಿಂದ ಜ್ಯೋತಿಯೊಂದು ಹುಟ್ಟಿ, ಮಹಾಪುರುಷ ರೂಪ ತಾಳಿತು. ಈ ರೂಪಕ್ಕೆ ಶಿವನು 'ದೇವಲ' ಎಂದು ನಾಮಕರಣ ಮಾಡಿದನು. ಆ ದೇವಲನು ಸರ್ವರಿಗೂ ಬಗೆ ಬಗೆಯ ವಸ್ತ್ರಗಳನ್ನು ನೇಯ್ದುಕೊಟ್ಟನು ಎಂದು ನೇಕಾರರ ವಂಶದ ಬಗೆಗಿನ ಕಥನವನ್ನು ಹೇಳಿದನು. ಇಷ್ಟೆಲ್ಲಾ ಭಾಗವತ ಕಾಲಕ್ಷೇಪವನ್ನು ಮಾಡುತ್ತಿದ್ದಂತಹ ಭಾಗವತರು ಸಹ ವೇಶ್ಯೆಯಾದ ಹೊಂಬಾಳಮ್ಮನ ಸಹವಾಸವನ್ನು ಬಯಸಿ ಹೋಗುತ್ತಿದ್ದನು. ಹೀಗೆ 'ತತ್ವ ಹೇಳೋಕೆ ಬದನೆಕಾಯಿ ತಿನ್ನೋಕೆ' ಎಂಬಂತೆ ಭಾಗವತರ ಇಬ್ಬಂದಿ ವ್ಯಕ್ತಿತ್ವವು ಈ ಕಾದಂಬರಿಯಲ್ಲಿ ಮೂಡಿ ಬಂದಿದೆ.

ಗಿರಿಜೆಯು ಮನೆಯಲ್ಲಿ ತನ್ನ ಬೇಸರವನ್ನು ಕಳೆದುಕೊಳ್ಳಲು ಗೆಳತಿಯಾದ ಕಮಲೆಯ ಜೊತೆ ಕೆಲಸಕ್ಕೆ ಸೇರಿಕೊಳ್ಳುತ್ತಾಳೆ. ಈ ನಡುವೆ ರಂಗದಾಸನ ಜೊತೆಗಿನ ಓಡಾಟ ಅವಳಿಗೆ ಸಾಕಷ್ಟು ನೆಮ್ಮದಿ ಖುಷಿಯನ್ನು ತಂದುಕೊಡುತ್ತದೆ. ಗಂಗಾಧರನು ಸಹ ತನ್ನ ಜೊತೆ ಓದುತ್ತಿದ್ದ ಹುಡುಗಿಯೊಬ್ಬಳನ್ನು ಪ್ರೀತಿಸಿ ಅವಳ ಜೊತೆಯೇ ಮದುವೆ ಆಗುತ್ತಾನೆ. ಆಕೆಯು ಸಾಕಷ್ಟು ಸ್ಥಿತಿವಂತಳಾಗಿದ್ದುದರಿಂದ ಉಗ್ರಪ್ಪನು ಯಾವುದೇ ಪ್ರತಿರೋಧವನ್ನು ತೋರದೆ ಮದುವೆಗೆ ಒಪ್ಪಿಕೊಳ್ಳುತ್ತಾನೆ. ಹಾಗೆಯೇ ಕಾಲೇಜಿನಲ್ಲಿ ರಂಗದಾಸ ಮತ್ತೆ ಸಾಂಬಶಿವನ್ ಇವರ ನಡುವಿನ ಮಾತುಕತೆಗಳು ಸಮಾಜದ ಬದಲಾವಣೆಯನ್ನು ಕುರಿತಂತೆ ಇರುತ್ತದೆ. ರಂಗದಾಸನು ಉಗ್ರಪ್ಪನಿಗೆ ವಿರುದ್ಧವಾಗಿ ಬೆಳೆಯುತ್ತಿದ್ದನ್ನು ಕಂಡು ಉಗ್ರಪ್ಪನು ರೌಡಿಗಳನ್ನು ಕರೆಸಿ, ಗೂಂಡಾಗಿರಿಯಿಂದ ರಂಗದಾಸನಿಗೆ ಹೊಡೆಸುತ್ತಾನೆ. ಆದರೂ ಕಾರ್ಮಿಕರು ತಮ್ಮ ಸಂಘಟನೆ, ಒಗ್ಗಟ್ಟನ್ನು ಬಿಡುವುದಿಲ್ಲ. ಒಮ್ಮೆ ರಂಗದಾಸನು ತನ್ನ ಪ್ರೀತಿಯನ್ನು ಗಿರಿಜೆಯ ಬಳಿ ಹೇಳಿಕೊಳ್ಳುತ್ತಾನೆ. ಆಕೆಯೂ ಸಹ ಅವನ ಪ್ರೀತಿಯನ್ನು ಒಪ್ಪಿಕೊಳ್ಳುತ್ತಾಳೆ. ಆದರೂ ಸಮಾಜ ಏನಂದುಕೊಳ್ಳುವುದೋ? ಎಂದು ಹಿಂಜರಿದಾಗ, 'ಸಮಾಜದ ವಿಷಯದಲ್ಲಿ ನೀನು ಭಯಪಟ್ಟುಕೊತಾ ಹೋದ್ರೆ, ನೀನು ಎಲ್ಲಿದ್ದರೂ ಸುಖವಾಗಿರಲ್ಲ ಗಿರಿಜಾ' ಎಂದು ಧೈರ್ಯ ತುಂಬುತ್ತಾನೆ. ಆಗ ಗಿರಿಜೆಗೆ ರಂಗದಾಸನ ಮೇಲೆ ವಿಶ್ವಾಸ ಮೂಡುತ್ತದೆ. ನಾಗವರ್ಮನ ಕಾದಂಬರಿಯಲ್ಲಿ ಬರುವ ಪುಂಡರೀಕ ಮಹಾಶ್ವೇತೆಯರ ಪವಿತ್ರ ಪ್ರೇಮದ ಸಂಕೇತ, ಕಡೆಯಲ್ಲಿ ಕಥಾನಾಯಕ ರಂಗದಾಸ,

ನಾಯಕಿ ಗಿರಿಜೆಯನ್ನು ಒಂದುಗೂಡಿಸುವಲ್ಲಿ ಸಫಲವಾಗಿದೆ.

ಹೀಗೆ ಕಾದಂಬರಿಯಲ್ಲಿ ಕಾರ್ಮಿಕರ ಜಾಗೃತಿ, ವಿಧವಾ ವಿವಾಹ, ಸಮಾಜದ ರೂಢಿ ಸಂಪ್ರದಾಯಗಳು, ದೊಡ್ಡವರ ಸಣ್ಣತನಗಳು ಮೊದಲಾದ ವಿಚಾರಗಳನ್ನು ವೈಚಾರಿಕ ನೆಲೆಗಟ್ಟಿನಲ್ಲಿ ವಿವರಿಸಲಾಗಿದೆ. ಒಂದು ಹಳ್ಳಿಯಲ್ಲಿ ಒಂದು ಜನಾಂಗದ ಅತ್ಯಂತ ಸೂಕ್ಷ್ಮ ಸ್ತರಗಳನ್ನು ವಿಶ್ಲೇಷಿಸುವಲ್ಲಿ, ಆ ವಿವರದ ಅಚ್ಚುಕಟ್ಟು ನಿರೂಪಣೆಯಲ್ಲಿ ಕಾದಂಬರಿಕಾರ್ತಿ ಯಶಸ್ವಿಯಾಗಿದ್ದಾರೆ.

**ಪರಾಮರ್ಶನ ಗ್ರಂಥಗಳು:**

1. ಅನುಪಮಾ ನಿರಂಜನ, (1982), ಎಳೆ, ಬೆಂಗಳೂರು: ಹೇಮಂತ ಸಾಹಿತ್ಯ.
2. ವಿಜಯಾ ದಬ್ಬೆ, (1999), ಮಹಿಳಾ ಸಾಹಿತ್ಯ ಮತ್ತು ಸಮಾಜ, ಬೆಂಗಳೂರು: ನವಕರ್ನಾಟಕ ಪ್ರಕಾಶನ.
3. ಬರಗೂರು ರಾಮಚಂದ್ರಪ್ಪ, (1995), ಬಂಡಾಯ ಸಾಹಿತ್ಯ ಮೀಮಾಂಸೆ, ಬೆಂಗಳೂರು: ಸಪ್ನ ಬುಕ್ ಹೌಸ್.
4. ಆಮೂರ ಜಿ.ಎಸ್., (1990), ಕನ್ನಡ ಕಾದಂಬರಿಯ ಬೆಳವಣಿಗೆ, ನವದೆಹಲಿ: ಕೇಂದ್ರ ಸಾಹಿತ್ಯ ಅಕಾಡೆಮಿ.
5. ರಾಘವೇಂದ್ರರಾವ್ ಎಚ್.ಎಸ್., (2005), ಕಥನ ಮತ್ತು ಮೌಲ್ಯ, ಬೆಂಗಳೂರು: ಅಭಿನವ.